ತಾರೀಖು 14ನೇ ಫಿಬ್ರವರಿ 1896.

ನಂ. 7339 —ರೆ. 2866.—ಮೈಸೂರ ಸರ್ವಿಸ್ ರೆಗ್ಯುಲೇಷ್ನಗಳ 172ನೇ ಆರ್ಟಿಕಲ್ ಅನುಸರಿಸಿ, ದೇವನಹಳ್ಳಿ ತಾಲ್ಲೂಕ ಅಮಲ್ದಾರ ಟಿ. ಚಿಕ್ಕಣ್ಣ ಬಿ. ಎ. ಯವರಿಗೆ, 1896ನೇ ಇಸವಿ ಫಿಬ್ರವರಿ 6ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಬಹುದಾದ ಇತರ ತಾರೀಖು ಮೊದಲು 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟಿ. ಚಿಕ್ಕಣ್ಣನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸದರೀ ತಾಲ್ಲೂಕು ಶಿರಸ್ತೇದಾರು ತಾಲ್ಲೂಕು ಚಾಲತಿ ಕೆಲಸಗಳ ಚಾರ್ಜನ್ನು ವಹಿಸಿರತಕ್ಕದ್ದು.

---

ತಾರೀಖು 15ನೇ ಫಿಬ್ರವರಿ 1896.

ನಂ. 7395.—ರೆ. 2880.—ಚಿತ್ರದುರ್ಗ ಡಿಪ್ಯುಟೈಜರಿ ಅಸಿಸ್ಟೆಂಟ್ ಕಮಿಷನರ ಮೆಸ್ಸರ್ ಸಿ. ಕೃಷ್ಣರಾಯರು ಅವರಿಗೆ, 1896ನೇ ಇಸವಿ ಜನವರಿ 22ನೇ ಮುಕ್ತಂ, 6601. ರ. 2545.ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಮೂಲಕ ಕೊಡಲ್ಪಟ್ಟ ಕ್ಯಾಜುಯಲ್ ರಜಾವನ್ನು ಮಾಹೆ ಗುಜಸ್ತಾ 27ನೇ ಮುಕ್ತಂ ಮಧ್ಯಾನ್ಹಾತ್ಪರ ಉಪಯೋಗಿಸಿಕೊಂಡು ಮಾಹೆ ಮಜಕೂರ 5ನೇ ಮುಕ್ತಂ ಅಪರಾನ್ಹದಲ್ಲಿ ಕೆಲಸದ ಮೇಲೆ ವಾಪಸ್ ಬಂದಿರುತ್ತಾರಾಗಿ ರಜಾದ ಪೈಕಿ ಉಳಿದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವೆ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

---

ರೆ ಬಿ ಲ್ವೆ.

ಇಸ್ತಿಹಾರ್‌ನಾಮೆ.

ಮೈಸೂರು ಗವರ್ನಮೆಂಟಿನವರಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಜರ್ಮ್ಯಾಗಳು ಸರಕಾರದ ಕೆಲಸೆಕ್ಕೋಸ್ಕರ ಅರಸೀಕೆರೆ ಯಿಂದ ಮಂಗಳೂರಿಗೆ ಅಂತರೆ ಹಾಬನಳಟ್ಟ, ಅಡಿಹಳ್ಳಿ, ಬಾಗಡದೇವುದ್ದ, ಹಾಸನ, ಆಲೂರು, ಬೆಳಗೋಡು, ಸಕಲೇಶಪುರ, ಹೆಬ್ಬನಾಲ, ಯಟಿಯಾನಹಳ್ಳಿ ಹಳ್ಳಿ, ಕೆಂಪಕಲ ಮತ್ತು ಮರಳೀಬೀಡ ಮಾರ್ಗವಾಗಿ ರಯಿಲ್ ರಸ್ತೆಯನ್ನು ಹಾಕುವ ಬಗ್ಗೆ ಬಹುಶಃ ಬೇಕಾಗಬಹುದೆಂದು ಕಾಣಬರುವದರಿಂದ ಇದಕ್ಕೆ ಸಂಬಂಧಪಟ್ಟ ತಮಾಂ ಜನಗಳಿಗೂ ಇದರಿಂದ ತಿಳಿಸುವದೇನಂದರೆ,—1894ನೇ ಇಸವಿ VIIನೇ ನಂಬರ ಮೈಸೂರು ಲ್ಯಾಂಡ್ ಅಕ್ವಿಜಿಷ್ನ ರೆಗ್ಯುಲೇಷನಿನ 4 ವ 5ನೇ ಸೆಕ್ಷನ್‌ಗಳಿಂದ ವುಂಟುಮಾಡಲ್ಪಟ್ಟ ಅಧಿಕಾರಗಳನ್ನ ಚಲಾಯಿಸುವದರಲ್ಲಿ ಮೈಸೂರು ಗವರ್ನಮೆಂಟಿನವರು, ಸದರೀ ಗವರ್ನಮೆಂಟಿನ ರೈಲ್ವೇ ಇಲಾಖೆ ಸೆಕ್ರೆಟರಿಯವರನ್ನೂ ಅವರ ತಾಬೇದಾರರನ್ನೂ ಮತ್ತು ಅವರ ನವುಕರರುಗಳನ್ನೂ ಸುದಾ ಈ ಆಕ್ಟಿನ ಕೆಲಸಗಳಿಗೋಸ್ಕರ ಮೊಕರರ್ ಮಾಡಿರುತ್ತಾರೆ.

ಹುಕುಂ ಬಮೋಜಿಬ್,
ಸಿ. ಬರ್ಡ ಕರ್ನಲ್,
ರೆಯಿಲ್ವೇ ಸೆಕ್ರೆಟರಿ.

---